# ಕರ್ನಾಟಕ ಸರ್ಕಾರ

ಸಂ. ತಾಂ.ಆಡಳಿತ(ಸ)ಸುತ್ತೋಲೆ.5/09-10

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು ದಿನಾಂಕ:4-7-2009

## ಸುತ್ತೋಲೆ

ವಿಷಯ: ಕೈಬರಹದ 11ಇ ನಕ್ಷೆಗಳನ್ನು ನೋಂದಣಿ ಕಾರ್ಯಕ್ಕೆ ಬಳಸದಂತೆ ನಿರ್ಬಂಧಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಸುತ್ತೋಲೆ ಸಂ.ಆರ್.ಡಿ.103 ಎಂ.ಆರ್.ಆರ್.2002 ದಿ:19-8-2006.

***

ಉಲ್ಲೇಖದ ಸುತ್ತೋಲೆ (1)ರ ಪ್ರಕಾರ ಉಪ ನೋಂದಣಿ ಕಛೇರಿಯಲ್ಲಿ ಜಮೀನು ನೋಂದಣಿ ಪೂರ್ವದಲ್ಲಿ 11ಇ ಸ್ಕೆಚ್ ನಕಾಶೆ ಹಾಜರುಪಡಿಸುವುದು ಕಡ್ಡಾಯವಿದ್ದ ಕಾರಣ, ಉಪ ನೋಂದಣಾಧಿಕಾರಿಗಳು 11ಇ ಸ್ಕೆಚ್ ಸಲ್ಲಿಸಿದ ನಂತರವೇ ನೋಂದಣಿ ಕೆಲಸವನ್ನು ಪೂರೈಸಬೇಕು.

ಸುಮಾರು 125 ತಾಲ್ಲೂಕುಗಳಲ್ಲಿ (ಪಟ್ಟಿ ಲಗತ್ತಿಸಿದೆ) 11ಇ ನಕ್ಷೆಗಳನ್ನು ಗಣಕೀಕೃತ ವ್ಯವಸ್ಥೆಯಲ್ಲಿ ನಿರ್ವಹಿಸಲಾಗುತ್ತಿದೆ. ಈ ಗಣಕೀಕೃತ ವ್ಯವಸ್ಥೆ 'ಮೋಜಣಿ ' ಯ ಮೂಲಕ ಗಣಕೀಕೃತ ನಕ್ಷೆಗಳನ್ನು ತಂತ್ರಾಂಶದಿಂದ ತಯಾರಿಸಿ ರೈತರಿಗೆ ವಿತರಿಸಲಾಗುತ್ತಿದೆ.

ಸಾರ್ವಜನಿಕರಿಗೆ ಬೋಗಸ್ ನಕ್ಷೆಗಳನ್ನು ಒದಗಿಸಬಾರದೆನ್ನುವ ಹಿನ್ನೆಲೆ ಮತ್ತು ಕ್ರಯಪತ್ರಗಳ ನೋಂದಣಿ ನಂತರ ' ಭೂಮಿ ' ಯೋಜನೆಯಲ್ಲಿ ಸರಿಯಾದ ನಕ್ಷೆಗಳನ್ನು ಬಳಸಬೇಕೆನ್ನುವ ಹಿನ್ನೆಲೆಯಲ್ಲಿ (ಮೋಜಣಿ ) ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ.

ಕೆಲವು ತಾಲ್ಲೂಕುಗಳಲ್ಲಿ ಬೋಗಸ್ ನಕ್ಷೆಗಳನ್ನು ಒದಗಿಸುತ್ತಿರುವ ಮತ್ತು ಗಣಕ ಯಂತ್ರದಿಂದ ತಯಾರಿಸಿರದ ನಕ್ಷೆಗಳನ್ನು (ಕೈಬರಹದ) ರೈತರಿಗೆ ಪೂರೈಸುತ್ತಿರುವ ಅಂಶ ಗಮನಕ್ಕೆ ಬಂದಿರುತ್ತದೆ. ಇಂತಹ ಸ್ಕೆಚ್‌ಗಳು ಯಾವ ಮೂಲದಿಂದ ತಯಾರಾಗಿರುತ್ತೆಂದು ತನಿಖೆ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಲಗತ್ತು ತಾಲ್ಲೂಕುಗಳ ಉಪ ನೋಂದಣಾಧಿಕಾರಿಗಳು ನೋಂದಣಿ ಮಾಡುವಾಗ 11ಇ ನಕ್ಷೆಗಳನ್ನು ಪರಿಶೀಲಿಸಿ ಕೈಬರಹದ 11ಇ ನಕ್ಷೆಗಳನ್ನು ಪರಿಗಣಿಸಬಾರದು.

ಮುಂದುವರೆದು ಆಗಿಂದಾಗ್ಗೆ ಮೋಜಣಿ ತಂತ್ರಾಂಶ ಅಳವಡಿಸುವ ತಾಲ್ಲೂಕುಗಳಲ್ಲಿ ಸಹ ಕೈಬರಹದ 11ಇ ನಕ್ಷೆಗಳನ್ನು ಪರಿಗಣಿಸಬಾರದು.

SSLR est letters: 8
6